# ಶ್ರೀ ಕ್ಷೇತ್ರ ಧರ್ಮಸ್ಥಳದಿಂದ
# ಬಡ ಕುಟುಂಬಕ್ಕೆ ಮನೆ ನಿರ್ಮಾಣ



**ಶಿರಸಿ, ಫೆಬ್ರವರಿ *28,2025:* "ಕಳೆದ ವರ್ಷವೇ ಮನೆ ಬೀಳುವ ಹಂತದಲ್ಲಿತ್ತು. ದೇವರ ದಯೆಯಿಂದ ಅತಿಯಾದ ಮಳೆಯಾದರೂ ಮನೆ ಬೀಳಲಿಲ್ಲ. ಈ ವರ್ಷದ ಮಳೆಗೆ ಈ ಮನೆ ತಡೆಯುವುದಿಲ್ಲ. ರಿಪೇರಿ ಮಾಡಿಸಲು ಕೈಯಲ್ಲಿ ಕಾಸಿಲ್ಲ. ನಮ್ಮ ಕಷ್ಟ ಯಾರಿಗೆ ಹೇಳೋದು. ಹಳೆಯ ಮನೆ ಬಿಟ್ಟರೆ ಬೇರೆ ನೆಲೆಯಿಲ್ಲ. ಕಾಯಿಲೆಯಿಂದ ಬಳಲುವ ಅಕ್ಕ. ಅವಳ ಆರೈಕೆ ನಾನೇ ನೋಡಿಕೊಳ್ಳಬೇಕು. ಎದ್ದು ಓಡಾಡಲು ಆಗುವುದಿಲ್ಲ. ನಡೆಯಲು ಆಗುವುದಿಲ್ಲ. ಅವಳಿಂದಾಗಿ ನನಗೆ ಮನೆ ಬಿಟ್ಟು ಹೋಗಲೂ ಆಗುವುದಿಲ್ಲ. ನಮ್ಮ ಪರಿಸ್ಥಿತಿ ಕೇಳುವವರಾರು? ದೇವರ ಮೇಲೆ ಭಾರ ಹಾಕಿ ದಿನದೂಡುತ್ತಿದ್ದೆವು" ಭಾವುಕವಾಗಿ ನುಡಿದರು ಮಲ್ಲಿಕಾರ್ಜುನ ಬಡಿಗೇರ.**

**ವಾತ್ಸಲ್ಯ ಮನೆ ಮಂಜೂರು:**

**ಬನವಾಸಿ ಸಮೀಪದ ಕಂತ್ರಾಜೆ ಗ್ರಾಮದಲ್ಲಿ ಸಣ್ಣ ತಗಡಿನ ಗುಡಿಸಲಿನಲ್ಲಿ ವಾಸವಾಗಿದ್ದ ಮಲ್ಲಿಕಾರ್ಜುನ ಬಡಿಗೇರ್ ವಿಶೇಷ ಚೇತನಳಾಗಿರುವ ತನ್ನ ಸಹೋದರಿಯ ಜೊತೆಯಲ್ಲಿ ವಾಸವಿದ್ದಾರೆ. ಅನಾರೋಗ್ಯದಲ್ಲಿ ಬಳಲುತ್ತಿರುವ ಸಹೋದರಿಯ ಆರೈಕೆಯನ್ನು ಮಾಡುವ ಜವಾಬ್ದಾರಿ ಇವರ ಹೆಗಲ ಮೇಲಿದೆ. ಸಣ್ಣ ಹೊಲಿಗೆ ಯಂತ್ರವನ್ನು ಇಟ್ಟುಕೊಂಡು ಬಟ್ಟೆ ಹೊಲಿದುಕೊಟ್ಟು ಬರುವ ಆದಾಯದಿಂದ ಜೀವನ ಸಾಗಿಸುತ್ತಿದ್ದಾರೆ. ಹೊಲಿಗೆಯಿಂದ ಬರುವ ಆದಾಯ ಜೀವನ ನಿರ್ವಹಣೆಗೆ ಸಾಲುತ್ತಿಲ್ಲ. ಸಹೋದರಿ ಬುದ್ಧಿಮಾಂದ್ಯೆ ಆಗಿರುವುದರಿಂದ ಅವಳನ್ನು ಮನೆಯಲ್ಲಿ ಬಿಟ್ಟು ಕೂಲಿ ಕೆಲಸಕ್ಕೆ ಹೋಗಲು ಆಗುವುದಿಲ್ಲ. ತೊಂದರೆಯಲ್ಲಿದ್ದರು ಮಲ್ಲಿಕಾರ್ಜುನ ಬಡಿಗೇರ.**

ಶೌರ್ಯ

ಇತ್ತೀಚೆಗೆ ಸ್ಥಳೀಯರು ಈ ಕುಟುಂಬ ಎದುರಿಸುತ್ತಿರುವ ಸಮಸ್ಯೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಮಾಹಿತಿ ನೀಡಿದ್ದರು. ಯೋಜನೆಯ ಕಾರ್ಯಕರ್ತರು ಮನೆಗೆ ಭೇಟಿ ನೀಡಿದಾಗ ಕುಟುಂಬದ ಪರಿಸ್ಥಿತಿ ಕರುಣಾಜನಕವಾಗಿರುವುದನ್ನು ಮನಗಂಡು ಮಾತೃಶ್ರೀ ಅಮ್ಮನವರ ಪರಿಕಲ್ಪನೆಯ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ಮನೆ ರಚನೆಗೆ ಬೇಡಿಕೆ ನೀಡಿ ಮಂಜೂರಾತಿ ಪಡೆದು ಹೊಸ ಮನೆ ರಚನೆ ಮಾಡಿಕೊಟ್ಟಿದ್ದಾರೆ.



**ಶೌರ್ಯದ ನೆರವು:**

ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡ ಬನವಾಸಿ ಘಟಕದ ಸ್ವಯಂಸೇವಕರು ಮನೆ ರಚನೆ ಕೆಲಸದಲ್ಲಿ ಸಹಕಾರ ನೀಡಿರುತ್ತಾರೆ. ಹಳೆಯ ಮನೆ ತೆರವುಗೊಳಿಸಿ ತಾತ್ಕಾಲಿಕವಾಗಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಡುವ ಜೊತೆಗೆ ಮನೆಯ ಅಡಿಪಾಯ ರಚನೆ,





ಶೌಚಾಲಯ ರಚನೆ, ಗೋಡೆ ರಚನೆ, ಮೇಲ್ಛಾವಣಿ ಹೊದಿಕೆ, ಮನೆಯ ಸುತ್ತಮುತ್ತಲು ಸ್ವಚ್ಛತೆ ಹೀಗೆ ಮನೆ ನಿರ್ಮಾಣದ ಆರಂಭದಿಂದ ಮುಕ್ತಾಯದ ವರೆಗೆ ಶ್ರಮಸೇವೆ ನೀಡಿರುತ್ತಾರೆ.

ಶಿರಸಿ ತಾಲ್ಲೂಕು ಯೋಜನಾಧಿಕಾರಿ ರಾಘವೇಂದ್ರ, ಜ್ಞಾನವಿಕಾಸ ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ, ಮೇಲ್ವಿಚಾರಕರಾದ ನಾಗರಾಜ್ ಇವರು ಸ್ವಯಂಸೇವಕರಿಗೆ ಮನೆ ರಿಪೇರಿ ಶ್ರಮದಾನದಲ್ಲಿ ಮಾರ್ಗದರ್ಶನ ನೀಡಿರುತ್ತಾರೆ.